ಅ) *1993-94ನೇ ಸಾಲಿನಲ್ಲಿ ಹುಕ್ಕೇರಿ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಗೆ ಒದಗಿಸಿದ ಹಣ ಎಷ್ಟು ಈ ಹಣದಿಂದ ಕಟ್ಟಲ್ಪಟ್ಟ ಕಟ್ಟಡಗಳು ಹಾಗೂ ರಸ್ತೆಗಳು ಎಷ್ಟು?*

ಆ) *ಇವುಗಳ ಕೆಲಸಗಳು ಯಾವ ಹಂತದಲ್ಲಿವೆ?*

ಇ) *ಇವುಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?*

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಹುಕ್ಕೇರಿ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ಕಾಮಗಾರಿಗಳಿಗೆ 93-94ರಲ್ಲಿ ಯೋಜನೆ ಅಡಿ ಒಟ್ಟು 18.50 ಲಕ್ಷ ರೂ.ಗಳು ಹಾಗೂ ಯೋಜನೇತರ ಅಡಿಯಲ್ಲಿ 18.03 ಲಕ್ಷ ರೂ.ಗಳನ್ನು ಒದಗಿಸಿದೆ. ಯೋಜನೆ ಅನುದಾನದ ಅಡಿ 3 ಸೇತುವೆಗಳನ್ನು 1 ರಸ್ತೆ ಡಾಂಬರೀಕರಣ ಹಾಗೂ 2 ಕಟ್ಟಡಗಳ ನಿರ್ಮಾಣದ ಕಾಮಗಾರಿಗಳು ಸೇರಿರುತ್ತವೆ. ಯೋಜನೇತರ ಅನುದಾನದ ಅಡಿಯಲ್ಲಿ ಒಟ್ಟು 22 ಕಿ.ಮೀ. ಉದ್ದದ ರಸ್ತೆಗಳಿಗೆ ಮರು ಡಾಂಬರೀಕರಣವೂ ಮತ್ತು 18.80 ಕಿ.ಮೀ ಉದ್ದಕ್ಕೆ ಜಲ್ಲಿ ಹಾಕುವ ಕಾಮಗಾರಿಗಳು ಸೇರಿರುತ್ತವೆ.

ಆ) ವಿವರಗಳು ಕೆಳಕಂಡಂತಿವೆ :

<u>1.ಸೇತುವೆಗಳು :</u>

1 ಸೇತುವೆ ಕಾಮಗಾರಿ ಪೂರ್ಣಗೊಂಡಿದೆ

1 ಸೇತುವೆ ಕಾಮಗಾರಿ ಪ್ರಗತಿಯಲ್ಲಿದೆ

1 ಸೇತುವೆ ಅಂದಾಜಿಗೆ ಮಂಜೂರಾತಿ ಆಗಬೇಕಿದೆ.

<u>2.ರಸ್ತೆ :</u> ಮೊಡಲಗಾ - ತಿಪ್ಪೂರು ರಸ್ತೆ (12 ಕಿ.ಮೀ) ಯ ಡಾಂಬರೀಕರಣದ ಅಂದಾಜು ಮಂಜೂರಾಗಬೇಕಿದೆ.

<u>3.ಕಟ್ಟಡಗಳು</u>

1 ಕಟ್ಟಡವು ಪೂರ್ಣಗೊಳ್ಳುವ ಹಂತದಲ್ಲಿದೆ.

1 ಕಟ್ಟಡಕ್ಕೆ ಅಂದಾಜು ಮಂಜೂರಾಗಬೇಕಿದೆ.

ಇ) ಪ್ರಗತಿಯಲ್ಲಿರುವ ಒಂದು ಸೇತುವೆ ಹಾಗೂ ಒಂದು ಕಟ್ಟಡವನ್ನು ಮಾರ್ಚಿ 94ರ ಒಳಗೆ ಪೂರ್ಣಗೊಳಿಸಲಾಗುವುದು. ಉಳಿದ ಕಾಮಗಾರಿಗಳನ್ನು ಅಂದಾಜಿಗೆ ಮಂಜೂರಾತಿ ದೊರೆತ ನಂತರ ತೆಗೆದುಕೊಂಡು ಆದಷ್ಟು ಶೀಘ್ರವಾಗಿ ಮುಗಿಸಲಾಗುವುದು.

ಶಿರೂರು ಡ್ಯಾಮ್‌ನಿಂದ ನೀರಾವರಿಯಾಗುವ ಪ್ರದೇಶ.

350 - ಶ್ರೀ ಉಮೇಶ್ ವಿ.ಕತ್ತಿ (ಹುಕ್ಕೇರಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) *ಹುಕ್ಕೇರಿ ತಾಲ್ಲೂಕಿಗೆ ಶಿರೂರ್ ಡ್ಯಾಮ್ ಮಂಜೂರು ಆಗಿದೆಯೇ ಹಾಗಿದ್ದರೆ ಯಾವ ಯಾವ ಹಳ್ಳಿಗಳಲ್ಲಿನ ಎಷ್ಟು ಎಕರೆ ಜಮೀನಿನಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದು ಹಾಗೂ ಇದರ ಕಾರ್ಯವನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಎಸ್.ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು) :

ಅ) ಶಿರೂರ್ ಡ್ಯಾಮ್ ಎಂಬ ಯೋಜನೆ ಇರುವುದಿಲ್ಲ. ಆದರೆ, ಹುಕ್ಕೇರಿ ತಾಲ್ಲೂಕಿನ ಶಿರೂರು ಬಳಿ ಉದ್ದೇಶಿಸಿರುವ ಮಾರ್ಕಂಡೇಯ ಯೋಜನೆಯ ಬಗ್ಗೆ ದಿನಾಂಕ 6-2-92ರಲ್ಲಿ ನಡೆದ ಕೃಷ್ಣ-ಗೋದಾವರಿ ಕೊಳ್ಳದ ಯೋಜನೆಗಳ ತಾಂತ್ರಿಕ ಸಮಿತಿಯ ಸಭೆಯಲ್ಲಿ ಚರ್ಚಿಸಲಾಗಿದ್ದು, ಇದಕ್ಕೆ ಅನುಗುಣವಾಗಿ ಯೋಜನೆಯಲ್ಲಿ ಹಲವು ಮಾರ್ಪಾಡುಗಳನ್ನು ಮಾಡಲಾಗುತ್ತಿದೆ. ಯೋಜನೆಯ ವರದಿಯನ್ನು ಅಂತಿಮವಾಗಿ

ತಯಾರಿಸಿದ ನಂತರ ಇದರಿಂದ ನೀರಾವರಿ ಸೌಲಭ್ಯ ಪಡೆಯುವ ಹಳ್ಳಿಗಳನ್ನು ಗುರುತಿಸಬಹುದಾಗಿದೆ.

ಶಿರೂರು ಡ್ಯಾಮ್ ಸಲುವಾಗಿ ರಸ್ತೆ ಪೂರ್ಣಗೊಳಿಸುವ ಬಗ್ಗೆ

349 - ಶ್ರೀ ಉಮೇಶ್ ವಿ.ಕತ್ತಿ (ಹುಕ್ಕೇಲಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿರೂರು ಡ್ಯಾಂ ಸಲುವಾಗಿ ಕಾಮಗಾರಿ ಪ್ರಾರಂಭಿಸಲು ರಸ್ತೆ ನಿರ್ಮಾಣ ಕಾರ್ಯ ಪ್ರಾರಂಭಿಸಿದ್ದನ್ನು ಅರಣ್ಯ ಇಲಾಖೆಯವರು ಅರ್ಧಕ್ಕೆ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ನೀರಾವರಿ ಮತ್ತು ಅರಣ್ಯ ಇಲಾಖೆ ಮಧ್ಯೆ ಇರುವ ತಾರತಮ್ಯ ಸರಿಪಡಿಸಿ ಕಾಮಗಾರಿ ಪ್ರಾರಂಭಿಸಲು ಸರ್ಕಾರದವರು ಜರೂರು ಕ್ರಮ ಕೈಗೊಳ್ಳುವರೇ?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) ಬಂದಿದೆ.

ಆ) ಈ ಬಗ್ಗೆ ತುರ್ತು ಕ್ರಮ ಕೈಗೊಳ್ಳಲಾಗುತ್ತಿದೆ.

ಕೊಟಬಾಗಿ ಏತ ನೀರಾವರಿ ಯೋಜನೆ.

348 - ಶ್ರೀ ಉಮೇಶ್ ವಿ.ಕತ್ತಿ (ಹುಕ್ಕೇಲಿ) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೊಟಬಾಗಿ ಏತ ನೀರಾವರಿ ಯೋಜನೆ ಮಂಜೂರು ಆಗಿದೆಯೆ;

ಆ) ಹಾಗಿದ್ದಲ್ಲಿ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಇ) ಈ ಯೋಜನೆಯಿಂದ ಹುಕ್ಕೇರಿ ತಾಲ್ಲೂಕಿನ ಯಾವ ಯಾವ ಹಳ್ಳಿಗಳ ಎಷ್ಟು ಎಷ್ಟು ಎಕರೆ ಜಮೀನುಗಳಿಗೆ ನೀರಿನ ಸೌಲಭ್ಯ ಕಲ್ಪಿಸಲಾಗುವುದು?

ಶ್ರೀ ಎಸ್.ಎಂ. ಕೃಷ್ಣ (ಉಪ ಮುಖ್ಯ ಮಂತ್ರಿಗಳು) :

ಅ) ಹುಕ್ಕೇರಿ ತಾಲ್ಲೂಕಿನ ಕೊಟಬಾಗಿ ಏತ ನೀರಾವರಿ ಯೋಜನೆಯನ್ನು, ಕೆಲ ನಿಬಂಧನೆಗಳೊಡನೆ, ಕೈಗೆತ್ತಿಕೊಳ್ಳಲು ಸರ್ಕಾರವು ದಿನಾಂಕ 31-10-92ರಂದು ಅನುಮೋದನೆ ನೀಡಿರುತ್ತದೆ.

ಆ) ಯೋಜನೆಗೆ ತಾಂತ್ರಿಕ ಸಮಿತಿಯ ಅನುಮೋದನೆ ದೊರೆತ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಇ) ಹುಕ್ಕೇರಿ ತಾಲ್ಲೂಕಿನ 13 ಗ್ರಾಮಗಳು ಮತ್ತು ಚಿಕ್ಕೋಡಿ ತಾಲ್ಲೂಕಿನ 11 ಗ್ರಾಮಗಳು ಈ ಏತ ನೀರಾವರಿ ಯೋಜನೆಯಿಂದ ಪ್ರಯೋಜನ ಪಡೆಯುತ್ತವೆ. ಯೋಜನೆಯ ಅನ್ವೇಷಣಾ ಕಾರ್ಯವು ಪ್ರಗತಿಯಲ್ಲಿದ್ದು, ಅದು ಮುಗಿದ ನಂತರ ಪ್ರತಿಯೊಂದು ಗ್ರಾಮದಲ್ಲಿ ನೀರಾವರಿ ಸೌಲಭ್ಯ ಪಡೆಯುವ ವಿಸ್ತೀರ್ಣದ ವಿವರ ತಿಳಿದುಬರುತ್ತದೆ.

ತುಮಕೂರು ಉಪನಾಲೆಯ ಬಳಿ ಬಾಗೂರು ನವಿಲೆ ಸುರಂಗದಿಂದ ಈಚೆಗೆ ಲಭ್ಯವಾಗಿರುವ ನೀರಿನ ಪ್ರಮಾಣ.

663 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರದ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಹೇಮಾವತಿ ಎಡದಂಡೆ ಯೋಜನೆಯ ತುಮಕೂರು ಉಪ ನಾಲೆಯ ಬಳಿಯ ಬಾಗೂರು ನವಿಲೆ ಸುರಂಗದಿಂದ ಈಚೆಗೆ ಲಭ್ಯವಾಗುವ ನೀರಿನ ಪ್ರಮಾಣವೆಷ್ಟು; (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು);